# ಪೊಲೀಸ್ ಠಾಣೆಯಲ್ಲಿ
# ನಿಮ್ಮ ದೂರಿಗೆ ಗಮನ ನೀಡಿಲ್ಲವೆ?




ರಾಜ್ಯದ ಯಾವುದೇ ಪೊಲೀಸ್ ಠಾಣೆಯಲ್ಲಿ ನಿಮ್ಮ ದೂರುಗಳಿಗೆ ತಕ್ಷಣ ಸೂಕ್ತ ಗಮನ ನೀಡದಿದ್ದರೆ ನೀವು ಶೀಘ್ರ ಪರಿಹಾರಕ್ಕಾಗಿ –

- ಪ್ರತಿ ಪೊಲೀಸ್ ಠಾಣೆಯ ಹೊರಗಡೆ ವಿಶೇಷವಾಗಿ ಪ್ರದರ್ಶಿಸಿರುವ ಬೋರ್ಡ್‌ನಲ್ಲಿ ನಮೂದಿಸಿರುವ ಸಂಬಂಧಿತ ಪೊಲೀಸ್ ಠಾಣೆಯ ಉಸ್ತುವಾರಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ / ಪೊಲೀಸ್ ಇನ್ಸ್‌ಪೆಕ್ಟರ್, ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ (ಡಿವೈಎಸ್‌ಪಿ) ಅವರ ದೂರವಾಣಿ ಸಂಖ್ಯೆಗಳಲ್ಲಿನ ಯಾವುದೇ ದೂರವಾಣಿ ಸಂಖ್ಯೆಗೆ ಕರೆ ಮಾಡಿ ನಿಮ್ಮ ಅಹವಾಲುಗಳನ್ನು ಹೇಳಿಕೊಳ್ಳಬಹುದು.
- ಎಲ್ಲ ಜಿಲ್ಲೆಗಳ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ (ಎಸ್‌ಪಿ) ಹಾಗೂ ಪೊಲೀಸ್ ಕಮೀಶನರ್‌ಗಳ ಕಛೇರಿಯಲ್ಲಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ರವರ ಉಸ್ತುವಾರಿಯಲ್ಲಿ ದೂರು ಸ್ವೀಕರಣಾ ಘಟಕಗಳನ್ನು ತೆರೆಯಲಾಗಿದೆ.
- ಪೊಲೀಸ್ ಠಾಣೆಗಳಲ್ಲಿ ನಿಮ್ಮ ದೂರನ್ನು ಸ್ವೀಕರಿಸದಿದ್ದರೆ, ನೀವು ಆಯಾ ವ್ಯಾಪ್ತಿಯ ಎಸ್‌ಪಿ ಕಚೇರಿಗೆ ಅಥವಾ ಪೊಲೀಸ್ ಆಯುಕ್ತರ ಕಚೇರಿಯಲ್ಲಿನ ದೂರು ಸ್ವೀಕರಣಾ ಘಟಕಕ್ಕೆ ಕೂಡ ದೂರು ನೀಡಬಹುದು.
- ದೂರು ಸ್ವೀಕೃತಿಯ ಬಗ್ಗೆ ಇಲ್ಲಿ ಕಂಪ್ಯೂಟರೀಕೃತ ಸ್ವೀಕೃತಿ ನೀಡಲಾಗುತ್ತದೆ. ಬೆಳಗ್ಗೆ 8.00 ರಿಂದ ಅಪರಾಹ್ನ 12.00ರ ವರೆಗೆ ಮತ್ತು 4.00 ರಿಂದ ರಾತ್ರಿ 8.00ರ ವರೆಗೆ ಈ ಘಟಕಗಳು ತೆರೆದಿರುತ್ತವೆ. ಹಾಗು ದೂರಿನ ಬಗ್ಗೆ ಕೈಗೊಂಡ ಕ್ರಮಗಳನ್ನು ಸಹ ನಿಮಗೆ ತಿಳಿಸಲಾಗುತ್ತದೆ.
- ನೀವು ಬೆಂಗಳೂರಿನಲ್ಲಿರುವ ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು (ಡಿಜಿ – ಐಜಿಪಿ) ರವರ ಕಛೇರಿಯಲ್ಲಿರುವ ದೂರವಾಣಿ ಸಂಖ್ಯೆ **1800 425 0100** ಗೆ ಕೂಡ ಉಚಿತ ಕರೆ ಮಾಡಿ ತಮ್ಮ ದೂರು ನೀಡಬಹುದು.

ನಾಗರೀಕರು ಮೊದಲು

**ಇದು ಕರ್ನಾಟಕ ಪೊಲೀಸ್‌ರ ಜನಪರ ಕಾರ್ಯಕ್ರಮ**

*ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಅವರಿಂದ ಪ್ರಕಟಿತ*

**ಕರ್ನಾಟಕ ವಾರ್ತೆ**

ಕರ್ನಾಟಕ ರಾಜ್ಯ ಪೊಲೀಸ್